(ಸಾಕ್ಷಿಯನ್ನು ದಿನಾಂಕ: 15.11.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಪಾರ್ಟಿ ಇನ್ ಪರ್ಸನ್ 7 ನೇ ಪ್ರತಿವಾದಿಯಿಂದಃ**

ನಿ.ಸಿ.7 ರಂತೆ ಕ್ರಮ ಸಂಖ್ಯೆ 1, ಬ್ಲಾಕ್ ನಂಬರ್ 1 ಅನುಭವದಂತೆ ವಿಸ್ತೀರ್ಣ 5 ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 2, ಬ್ಲಾಕ್ ನಂಬರ್ 2 ಅನುಭವದಂತೆ ವಿಸ್ತೀರ್ಣ $3^{1/2}$ ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 3, ಬ್ಲಾಕ್ ನಂಬರ್ 3 ಅನುಭವದಂತೆ ವಿಸ್ತೀರ್ಣ $26^{1/2}$ ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 4, ಬ್ಲಾಕ್ ನಂಬರ್ 4 ಅನುಭವದಂತೆ ವಿಸ್ತೀರ್ಣ $4^{1/2}$ ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 5, ಬ್ಲಾಕ್ ನಂಬರ್ 5 ಅನುಭವದಂತೆ ವಿಸ್ತೀರ್ಣ 1 ಎಕರೆ 6 ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 1 ರಿಂದ 5 ರ ಒಟ್ಟು ವಿಸ್ತೀರ್ಣ 2 ಎಕರೆ 5½ ಗುಂಟೆ ಇರುತ್ತದೆ ಎಂದರೆ ಸರಿ.

ಪ್ರತಿವಾದಿಗಳ ಅನುಭವದಂತೆ ಕ್ರಮ ಸಂಖ್ಯೆ 6, ಬ್ಲಾಕ್ ನಂಬರ್ 6 ಅನುಭವದಂತೆ ವಿಸ್ತೀರ್ಣ 5 ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 7, ಬ್ಲಾಕ್ ನಂಬರ್ 7 ಅನುಭವದಂತೆ ವಿಸ್ತೀರ್ಣ $16^{1/2}$ ಗುಂಟೆ

ಇರುತ್ತದೆ.

ಕ್ರಮ ಸಂಖ್ಯೆ 8, ಬ್ಲಾಕ್ ನಂಬರ್ 8 ಅನುಭವದಂತೆ ವಿಸ್ತೀರ್ಣ $4^{1/2}$ ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 9, ಬ್ಲಾಕ್ ನಂಬರ್ 9 ಅನುಭವದಂತೆ ವಿಸ್ತೀರ್ಣ $38^{1/2}$ ಗುಂಟೆ ಇರುತ್ತದೆ.

ಕ್ರಮ ಸಂಖ್ಯೆ 6 ರಿಂದ 9 ರ ಒಟ್ಟು ವಿಸ್ತೀರ್ಣ 1 ಎಕರೆ 24½ ಗುಂಟೆ ಇರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎ.ಆರ್.ಆರ್., ವಾದಿಗಳ ಪರ ವಕೀಲರಿಂದಃ**

ನಾವು ಯಾವುದೇ ಜಮೀನು ಅಳತೆ ಮಾಡಬೇಕಾದರೆ ನಮ್ಮ ಕಚೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸುತ್ತೇವೆ ಎಂದರೆ ಸರಿ. ಕುಣಿಗಲ್ ತಾಲ್ಲೂಕಿನಲ್ಲಿ ರೀ ಸರ್ವೆ ಸೆಟಲ್ ಮೆಂಟ್ 1935 ರಲ್ಲಿ ಆಗಿರುತ್ತದೆ. ಪುನಹ ಸೆಕೆಂಡ್ ಕ್ಲಾಸ್ ರೀ ಸರ್ವೆ ಸೆಟಲ್ ಮೆಂಟ್ ಅನ್ನು 1962-63 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ.

ನ್ಯಾಯಾಲಯದಿಂದ ಯಾವುದೇ ದಾಖಲೆ ಬಂದರೆ ನಾವು ದಾಖಲೆಗಳ ಮೇಲೆ Received ಎಂದು ಬರೆದು ಸಹಿ ಮಾಡುತ್ತೇವೆ ಎಂದರೆ ಸರಿ. ಆಯುಕ್ತರ ವಾರಂಟ್ ಜೊತೆಗೆ ದಾಖಲಾತಿಗಳ ಪಟ್ಟಿ ಸಲ್ಲಿಸಿರುವುದಿಲ್ಲ, ಆದರೆ ದಾಖಲಾತಿಗಳನ್ನು ಕಳುಹಿಸಿರುತ್ತಾರೆ. ನನಗೆ ಮೊದಲ ಬಾರಿಗೆ ನನಗೆ ಆಯುಕ್ತರ ವಾರಂಟ್ ಜೊತೆಗೆ ವಾದಿಗಳ ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ಮಾತ್ರ ಬಂದಿರುತ್ತದೆ ಎಂದರೆ ಸರಿ. ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ಮತ್ತು ವಾರಂಟ್ ಸ್ವೀಕೃತಿ ಸಹಿ ಮಾಡಿರುವುದಿಲ್ಲ.

ಯಾವುದೇ ಗ್ರಾಮಕ್ಕೆ ಒಂದು ಸ್ಥಳದಲ್ಲಿ ಬಾಂದು ಕಲ್ಲು ಇರುತ್ತದೆ ಎಂದರೆ ಸರಿ.

ಅಲ್ಲಿಂದ ಎಷ್ಟು ಸರಪಳಿ ವಿಸ್ತೀರ್ಣಕ್ಕೆ ಯಾವ ಜಮೀನು ಎಂದು ಅಳತೆ ಸಿಗುತ್ತದೆ ಎಂದರೆ ಸರಿ. ಅದೇ ರೀತಿ ಅದರಲ್ಲಿ ಕುಣಗಳು ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ಕುಣಗಳನ್ನು ಹುಡುಕಿದರೆ ಸಿಗುತ್ತದೆ ಎಂದರೆ ಸರಿ. ನಾವು ನ್ಯಾಯಾಲಯದಿಂದ ಯಾವುದೇ ಆಯುಕ್ತರ ವಾರಂಟ್ ಬಂದಾಗ ಸ್ಥಳಕ್ಕೆ ಭೇಟಿ ನೀಡಿದ ಅಳತೆ ಕಾರ್ಯ ಮಾಡಿದ ನಂತರ ಪಂಚನಾಮೆ ಬರೆಯುತ್ತೇವೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ, ಕಚೇರಿಗೆ ಹಿಂದಿರುಗಿ ಸ್ಕೇಲ್ ಗೆ ತಕ್ಕಂತೆ ಪಕ್ಕಾ ನಕ್ಷೆಯನ್ನು ತಯಾರಿಸುತ್ತೇವೆ ಎಂದರೆ ಸರಿ. ಗೂಗಲ್ ನಲ್ಲಿ 95% ಕರಾರುವಕ್ಕಾಗಿ ಸಿಗುತ್ತದೆ, ದಿಶಾಂಕ್ ನಲ್ಲಿ 92% ಕರಾರುವಕ್ಕಾಗಿ ಅಂತರ್ಜಾಲದಲ್ಲಿ ಮಾಹಿತಿ ಸಿಗುತ್ತದೆ ಎಂದರೆ ಸರಿ.

ಮೊದಲನೇ ಬಾರಿಗೆ ನಾವು ಪಕ್ಷಗಾರರಿಗೆ ನೋಂದಣಿ ಅಂಚೆ ಮೂಲಕ ನಾವು ಸ್ಥಳಕ್ಕೆ ಭೇಟಿಯಾಗುವ ವಿಚಾರವನ್ನು ತಿಳಿಸಿರುತ್ತೇವೆ, ಆ ನೋಟಿಸಿನ ನಕಲು ಕಡತದಲ್ಲಿ ಇರುವುದಿಲ್ಲ, ಕಳುಹಿಸಿದ ಬಗ್ಗೆ ಒಂದು ಅಂಚೆ ರಶೀದಿ ಇರುತ್ತದೆ, ಆದರೆ ಅಂಚೆ ಸ್ವೀಕೃತಿ ಪತ್ರ ಅಥವಾ ಅಂಚೆ ಲಕೋಟೆಗಳು ಇರುವುದಿಲ್ಲ. ನಾನು ಮೊದಲನೆ ಬಾರಿಗೆ ಕಳುಹಿಸಿದ ನೋಟಿಸು ಪಕ್ಷಗಾರರಿಗೆ ತಲುಪಿರುತ್ತದೆ. ಸದರಿ ನೋಟಿಸು ಜಾರಿಯಾದ ಬಗ್ಗೆ ಸ್ವೀಕೃತಿ ಪತ್ರ ಕಡತದಲ್ಲಿರುವುದಿಲ್ಲ.

ಪ್ರಥಮ ಬಾರಿಗೆ ನಾವು ಎಂದು ಸ್ಥಳಕ್ಕೆ ಬರುತ್ತೇವೆಂದು ಪಕ್ಷಗಾರರಿಗೆ ತಿಳಿಸಿರುತ್ತೇನೆಂದು ಹೇಳಲಾಗುವುದಿಲ್ಲ, ಆ ಬಗ್ಗೆ ಕಡತದಲ್ಲಿ ದಾಖಲೆ ಇರುವುದಿಲ್ಲ. ಈಗ ನನಗೆ ತೋರಿಸುತ್ತಿರುವ ನಕ್ಷೆ ಗೂಗಲ್ ನಲ್ಲಿ ತೆಗೆದಿರುವ ನಕ್ಷೆ ಇರುತ್ತದೆ, ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ವಾದಿಪರ ವಕೀಲರ ಕೋರಿಕೆಯ ಮೇರೆಗೆ **ನಿ.ಪಿ.41** ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಎರಡು ನಕ್ಷೆಗಳು ಕಂಪೂಟರ್ ನಲ್ಲಿ ಅಂತರ್ಜಾಲದಲ್ಲಿ ತೆಗೆದಿರುವ ನಕ್ಷೆಗಳು ಇರುತ್ತವೆ ಎಂದರೆ ಸರಿ. ಸದರಿ ಸ್ಕೆಚ್ ಗಳನ್ನು

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನಿ.ಪಿ.42 ಮತ್ತು ನಿ.ಪಿ.43 ಎಂದು ಗುರುತಿಸಲಾಯಿತು. ನಿ.ಪಿ.22 ಮತ್ತು ನಿ.ಪಿ.23 ತಹಶೀಲ್ದಾರ್ ರವರು ನೀಡಿರುವ ನಕ್ಷೆಯ ದೃಢೀಕೃತ ನಕಲುಗಳು ಇರುತ್ತವೆ ಎಂದರೆ ಸರಿ. ನಿ.ಪಿ.34 ನಮ್ಮ ಕಚೇರಿಯಿಂದ ನೀಡಿದ ಜಮೀನಿನಲ್ಲಿ ಖರಾಬು ಮತ್ತು ಐನು ಜಮೀನಿನ ವಿಸ್ತೀರ್ಣದ ದಾಖಲೆ ಇರುತ್ತದೆ ಎಂದರೆ ಸರಿ. ನಿ.ಪಿ.34 ಮತ್ತು ನಿ.ಪಿ.35 ಟಿಪ್ಪಣಿ ಇರುತ್ತದೆ ಎಂದರೆ ಸರಿ. ನಿ.ಪಿ.34 ಮತ್ತು 35 ರಲ್ಲಿ ತೋರಿಸಿರುವ ನಕ್ಷೆಗೂ ಮತ್ತು ನಾನು ಆಯುಕ್ತರ ವರದಿಯೊಂದಿಗೆ ಸಿದ್ದಪಡಿಸಿರುವ ನಕ್ಷೆಗೂ ತಾಳೆ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ನಾನು ಟಿಪ್ಪಣಿಯನ್ನು ಅಟ್ಲಾಸ್ ಮಾಡಿ ನೀಡಿರುತ್ತೇನೆಂದು ನುಡಿಯುತ್ತಾರೆ. ನಿ.ಪಿ.35 ಅಟ್ಲಾಸ್ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನಮ್ಮ ಕಚೇರಿಯಿಂದ ನೀಡಿರುತ್ತೇವೆ ಎಂದರೆ ಸರಿ. ನಿ.ಪಿ.35 ರಂತೆ ಕಾವೇರಿ ನೀರಾವರಿ ನಿಗಮಕ್ಕೆ 1 ಎಕರೆ 32 ಗುಂಟೆ ಐನು ಜಮೀನು ಮತ್ತು 1 ಗುಂಟೆ ಖರಾಬು ಸ್ವಾಧೀನವಾಗಿರುತ್ತದೆ. ನಾನು ಸರ್ವೆ ನಂಬರ್ 99 ರಲ್ಲಿ ಯಾರ ಜಾಗದಲ್ಲಿ ಎಷ್ಟೆಷ್ಟು ಜಮೀನು ನಾಲೆಗೆ ಹೋಗಿರುತ್ತದೆಂದು ನಮೂದು ಮಾಡಿರುವುದಿಲ್ಲ.

ನಿ.ಪಿ.41 ರಲ್ಲಿ ಸರ್ವೆ ನಂಬರ್ 99/1 ರಲ್ಲಿ ಎರಡು ಮನೆ ಮತ್ತು ಒಂದು ಷೆಡ್ ಕಾಣುತ್ತದೆ ಎಂದರೆ ಸರಿ. ಸದರಿ ಮನೆ ಮತ್ತು ಷೆಡ್ ಅನ್ನು ನಾನು ನನ್ನ ಆಯುಕ್ತರ ವರದಿಯೊಂದಿಗೆ ಸಲ್ಲಿಸಿರುವ ನಕ್ಷೆಯಲ್ಲಿ ನಮೂದು ಮಾಡಿರುವುದಿಲ್ಲ. ವಾದಿ ಪ್ರತಿವಾದಿಗಳ ಮನೆಗಳ ಹಿರಿದೆ ನಿಪಿ 41 ರಂತೆ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ಸರ್ವೆ ನಂಬರ್ 99/1 ರ ಪಶ್ಚಿಮ ಭಾಗದಲ್ಲಿ ಎರಡು ಗಡಿ ಕಲ್ಲುಗಳಿದ್ದು ಉಳಿದಂತೆ ಅವರ ಸ್ವಾಧೀನಕ್ಕೆ ತಕ್ಕಂತೆ ಹಿಸ್ಸಾ ಕಲ್ಲುಗಳು ಇರುವುದಿಲ್ಲ. ನಾನು ಆಯಕ್ತರ ವರದಿಯೊಂದಿಗೆ ಜಾರಿಗೊಳಿಸಲು ಹೋದಾಗ ಮಾತ್ರ ಸದರಿ ಸ್ವತ್ತನ್ನು ನೋಡಿರುತ್ತೇನೆ. ನಾನು ವಾದಿ ಪ್ರತಿವಾದಿಗಳ ಹೇಳಿಕೆಯ ಮೇರೆಗೆ ಯಾರ್ಯಾರು ಎಷ್ಟೆಷ್ಟು ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದು ನಮೂದಿಸಿರುತ್ತೇನೆ, ಆ ಬಗ್ಗೆ ಪ್ರತ್ಯೇಕ ದಾಖಲಾತಿ

ಇರುವುದಿಲ್ಲ. ನಾವು ಹದ್ದುಬಸ್ತು ದಾವೆಗಳಲ್ಲಿ ಎಷ್ಟು ಒತ್ತುವರಿ ಮಾಡಿರುತ್ತಾರೆಂದು ನಮೂದು ಮಾಡಿರುತ್ತೇವೆ. ನಾನು ಮಾಲೀಕತ್ವದ ಪ್ರಕಾರ ನಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳ ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ನಲ್ಲಿ ಮಾಲೀಕತ್ವದಂತೆ ವಿಸ್ತೀರ್ಣ ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿ.ಪಿ.6 ನಕ್ಷೆಯಲ್ಲಿ ಮಾಲೀಕತ್ವದಂತೆ ವಿಸ್ತೀರ್ಣ ನಮೂದು ಮಾಡಿರುತ್ತೇನೆ. ಅದರಲ್ಲಿ ಅತೀಕ್ರಮ ಮಾಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ನಿ.ಪಿ.6 ರಲ್ಲಿ 2 ನೇ ಹಿಸ್ಸೆ ಪಕ್ಕದಲ್ಲಿರುವ ಸ್ವತ್ತು ವಾದಿಗಳಿಗೆ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.7 ರಲ್ಲಿರುವ ವಿಚಾರಗಳು ನಿ.ಪಿ.6 ರಲ್ಲಿರುವ ವಿಚಾರಗಳಿಗೆ ತದ್ವಿರುದ್ಧವಾಗಿರುತ್ತವೆ ಎಂದರೆ ಸರಿ.

ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ಪ್ರಕಾರ 1 ರಿಂದ 5 ರ ಆಸ್ತಿಗಳ ಗುರುತುಗಳನ್ನು ಮಾಡಬೇಕೆಂದು ಮತ್ತು ಅಳತೆ ಮಾಡಬೇಕೆಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಅದರಂತೆ ಭೂ ಮಾಪಕರ ಕಚೇರಿಯಿಂದ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ನಮ್ಮ ಕಚೇರಿಯಿಂದ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುತ್ತೇನೆ, ಅದರ ಆಧಾರದ ಮೇರೆಗೆ ನಮೂದು ಮಾಡಿರುತ್ತೇನೆ, ಆದರೆ ಆ ಬಗ್ಗೆ ವರದಿಯಲ್ಲಿ ಪ್ರತ್ಯೇಕವಾಗಿ ನಮೂದು ಮಾಡಿರುವುದಿಲ್ಲ, ಸದರಿ ನಮ್ಮ ಕಚೇರಿಯ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ವರದಿಯೊಂದಿಗೆ ಸಲ್ಲಿಸಿರುತ್ತೇನೆ. ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ನಲ್ಲಿ ಪಕ್ಷಗಾರರ ಆಸ್ತಿಗಳನ್ನು ಪ್ರತ್ಯೇಕ ಬಣ್ಣಗಳಲ್ಲಿ ನಮೂದು ಮಾಡಬೇಕೆಂದು ಮೆಮೊ ಆಫ್ ಇನ್ಸ್ ಟ್ರಕ್ಸನ್ಸ್ ನಲ್ಲಿ ನಮೂದು ಇರುತ್ತದೆ ಎಂದರೆ ಸರಿ. ನಾನು ನನ್ನ ವರದಿಯಲ್ಲಿ ವಿವಿಧ ಬಣ್ಣಗಳಿಂದ ನಮೂದು ಮಾಡಿರುವುದಿಲ್ಲ, ಆದರೆ ಬ್ಲಾಕ್ ಗಳನ್ನು ಮಾತ್ರ ನಮೂದು ಮಾಡಿರುತ್ತೇನೆ. ನಾನು ಅಳತೆಯಾದ ಕೂಡಲೇ ಪಂಚನಾಮೆ ಬರೆಯಬೇಕೆಂದು ಇರುತ್ತದೆ ಎಂದರೆ ಸರಿ. ಪ್ರಥಮ ಬಾರಿಗೆ ನಾನು ಭೇಗಿ

ನೀಡಿದಾಗ ಆ ಬಗ್ಗೆ ಪಂಚನಾಮೆಯನ್ನು ಬರೆದಿರುತ್ತೇನೆ. ಸದರಿ ದಾಖಲೆಗೆ ವಾದಿ ಪ್ರತಿವಾದಿಗಳು ಇಬ್ಬರು ಸಹಿ ಮಾಡಿದ್ದರು ಎಂದರೆ ಸರಿ. ಸದರಿ ಪ್ರಥಮ ಬಾರಿಗೆ ನಾನು ಭೇಟಿ ನೀಡಿದಾಗ ತಯಾರಿಸಿದ ಕಚ್ಚಾ ನಕ್ಷೆ ಮತ್ತು ಪಂಚನಾಮೆ ಕಡತದಲ್ಲಿರುವುದಿಲ್ಲ. ಸದರಿ ಕಚ್ಚಾ ನಕ್ಷೆ ಮತ್ತು ಪಂಚನಾಮೆಯನ್ನು ಛಾಯಚಿತ್ರ ತೆಗೆದುಕೊಳ್ಳಲು ಪಕ್ಷಗಾರರಿಗೆ ನಾನು ಅನುಮತಿ ನೀಡಿದ್ದೆನು ಎಂದರೆ ಸರಿ.

ನಾನು ಎರಡನೇ ಬಾರಿ ಭೇಟಿ ಮಾಡುವ ಪೂರ್ವದಲ್ಲಿ ನೋಟಿಸನ್ನು ನೀಡಿರುತ್ತೇನೆ. ನಾನು ಪ್ರಥಮ ಬಾರಿಗೆ ಎಂದು ಸ್ಥಳ ತನಿಖೆಗೆ ಹೋಗಿರುತ್ತೇನೆಂದು ಹೇಳಲಾಗುವುದಿಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ಪಕ್ಷಗಾರಗಿರಿಗೆ ದಿನಾಂಕಃ 24.01.2021 ರಂದು ನೀಡಿರುತ್ತೇವೆ, ಸದರಿ ನೋಟಿಸಿನಲ್ಲಿ ದಿನಾಂಕಃ 03.02.2021 ರಂದು ಅಳತೆ ಕಾರ್ಯಕ್ಕೆ ಬೆಳಗ್ಗೆ 10.00 ಗಂಟೆಗೆ ಬರುತ್ತೇನೆಂದು ನಮೂದು ಮಾಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನಿ.ಪಿ.44 ಎಂದು ಗುರುತಿಸಲಾಯಿತು. ಪ್ರತಿವಾದಿಗೆ ಕೂಡ ಸದರಿ ನೋಟಿಸನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸಿನಂತೆ ನಾನು ಸ್ಥಳಕಪ್ಕಿ ಭೇಟಿ ನೀಡಿ ಅಳತೆ ಕಾರ್ಯ ಮಾಡಿರುತ್ತೇನೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆ ನಾನು ಎರಡನೇ ಬಾರಿಗೆ ಅಳತೆ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ನೀಡಿರುವ ನೋಟಿಸು ಇರುತ್ತದೆ ಎಂದರೆ ಸರಿ, ಸದರಿ ದಾಖಲೆಯಲ್ಲಿ ನಾನು ಎಂದೂ ನೋಟಿಸು ನೀಡಿರುತ್ತೇನೆಂದು ನಮೂದು ಇರುವುದಿಲ್ಲ, ಆದರೆ ದಿನಾಂಕಃ 15.09.2021 ರಂದು ಅಳತೆ ಕಾರ್ಯಕ್ಕೆ ಬರುತ್ತೇನೆಂದು ನಮೂದು ಇರುತ್ತದೆ, ಸದರಿ ದಾಖಲೆಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದರಿಂದ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ನಿ.ಪಿ.45 ಎಂದು ಗುರುತಿಸಲಾಯಿತು.

ನಾನು ಮೊದಲನೇ ಬಾರಿ ಭೇಟಿ ನೀಡಿದಾಗ ಅಳತೆ ಕಾರ್ಯ ಮಾಡಿದ್ದು

ಪಂಚನಾಮೆಯನ್ನು ಕೂಡ ಮಾಡಿರುತ್ತೇನೆ, ಆದರೆ ನನಗೆ ಅಳತೆ ಕಾರ್ಯ ಮನಸ್ಸಿಗೆ ತೃಪ್ತಿದಾಯಕವಾಗದೇ ಇದ್ದ ಕಾರಣ ಮತ್ತೊಮ್ಮೆ ನೋಟಿಸನ್ನು ನೀಡಿ ಎರಡನೇ ಬಾರಿಗೆ ಅಳತೆ ಕಾರ್ಯ ಮಾಡಿರುತ್ತೇನೆ. ಎರಡನೇ ಬಾರಿ ಅಳತೆ ಕಾರ್ಯ ಮಾಡಿದಾಗ ಅಳತೆ ಸರಿಯಾಗಿ ಹೊಂದಾಣಿಕೆಯಾಗಿರುವ ಕಾರಣ ಎರಡನೇ ಬಾರಿಯ ಅತಳೆ ಕಾರ್ಯ ತೃಪ್ತಿದಾಯಕವಾಗಿತ್ತು. ನಾನು ಎರಡನೇ ಬಾರಿಗೆ ಅಳತೆ ಕಾರ್ಯಕ್ಕೆ ಹೋಗುವ ಪೂರ್ವದಲ್ಲಿ ತನಗೆ ಮೊದಲನೇ ಬಾರಿಯ ಅಳತೆ ಕಾರ್ಯ ತೃಪ್ತಿದಾಯಕವಾಗಿಲ್ಲವೆಂದು ಮತ್ತೊಮ್ಮೆ ಅಳತೆ ಕಾರ್ಯ ಮಾಡಲು ಅನುಮತಿಯನ್ನು ನೀಡಬೇಕೆಂದು ನ್ಯಾಯಾಲಯದಿಂದ ಅನುಮತಿ ಪಡೆದಿರುವುದಿಲ್ಲ. ನಾನು ಸಲ್ಲಿಸಿರುವ ಆಯುಕ್ತರ ವರದಿಯಲ್ಲಿ ನನ್ನ ಪ್ರಥಮ ಅಳತೆ ತೃಪ್ತಿದಾಯಕವಾಗಿಲ್ಲ ಎಂದು ನಮೂದು ಮಾಡಿರುವುದಿಲ್ಲ. ನಾನು ಎರಡನೇ ಬಾರಿ ಅಳತೆ ಮಾಡಲು ನಮ್ಮ ಮೇಲಾಧಿಕಾರಿಗಳಿಗೆ ಮೌಖಿಕವಾಗಿ ತಿಳಿಸಿ ಅನುಮತಿ ಪಡೆದಿರುತ್ತೇನೆ, ಆದರೆ ಲಿಖಿತ ಆದೇಶವಿರುವುದಿಲ್ಲ. ಆ ವಿಚಾರವನ್ನು ನನ್ನ ಆಯುಕ್ತರ ವರದಿಯಲ್ಲಿ ನಮೂದು ಮಾಡಿರುವುದಿಲ್ಲ. ನಾನು ಮೊದಲನೇ ಬಾರಿ ಅಳತೆ ಕಾರ್ಯ ಮಾಡಿದಾಗ ಸ್ಕೆಚ್ ತಯಾರಿಸಿರಲಿಲ್ಲ, ಆ ಕಾರಣಕ್ಕಾಗಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ.

ನಾನು ಬಿದನಗೆರೆ ಗ್ರಾಮದಲ್ಲಿ ಬಿ.ಆರ್.ಕೃಷ್ಣಪ್ಪ ಎಂಬುವವರ ಜಮೀನನ್ನು ಅಳತೆ ಮಾಡಿ ಎರಡು ವಿವಿಧ ನಕ್ಷೆಗಳನ್ನು ನೀಡಿರುತ್ತಾರೆಂದು ನನ್ನ ಮೇಲೆ ಆರೋಪ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಸ್ಥಳಕ್ಕೆ ಭೇಟಿ ನೀಡದೇ ಅಳತೆ ನಕ್ಷ ತಯಾರಿಸಿರುತ್ತೇನೆಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಾನು ಅಳತೆ ಕಾರ್ಯದಲ್ಲಿ ತಾರತಮ್ಯ ಮಾಡಿರುತ್ತೇನೆಂದು ದಿನಪತ್ರಿಕೆಯಲ್ಲಿ ನಮೂದು ಆಗಿರುತ್ತದೆ. ಆ ಬಗ್ಗೆ ನಾನು ತಾರತಮ್ಯ ಮಾಡಿರುವುದಿಲ್ಲ. ಈಗ ನನಗೆ ತೋರಿಸಿರುವ ದಾಖಲೆ ಸದರಿ ದಿನಪತ್ರಿಕೆ ಇರುತ್ತದೆ ಎಂದರೆ ಸರಿಯಲ್ಲ.

ಮೊದಲನೇ ಬಾರಿಗೆ ನಾನು ಅಳತೆ ಕಾರ್ಯಕ್ಕೆ ಹೋದಾಗ ಮಾಲೀಕತ್ವ ಮತ್ತು ಅನುಭವಕ್ಕೆ ಸರಿಯಾಗಿ ನಾನು ಅಳತೆ ಕಾರ್ಯ ಮಾಡಿದ್ದು ನಂತರ ಎರಡನೇ ಬಾರಿಗೆ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಕಚ್ಚಾ ನಕ್ಷೆಗಳನ್ನು ತಯಾರಿಸಿ ಸುಳ್ಳು ವರದಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರಕವಾಗಿ ಪ್ರತಿವಾದಿಯ ಕೋರಿಕೆಯಂತೆ ಕಚ್ಚಾ ನಕ್ಷೆಗಳನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಳಿಗೆ ಸಹಾಯ ಮಾಡಲು ವೈಯಕ್ತಿಕ ಆಸಕ್ತಿಯಿಂದ ಎರಡನೇ ಬಾರಿಗೆ ಅಳತೆ ಕಾರ್ಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾನೂನುಬದ್ಧವಾಗಿ ಆಯುಕ್ತರ ವರದಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಆಯುಕ್ತರ ವರದಿ ದೋಷಪೂರಕವಾಗಿರುತ್ತದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾನು ನ್ಯಾಯಾಲಯದಿಂದ ಕಾರಣ ಕೇಳಿ ನೋಟಿಸು ಕೊಡುವವರೆವಿಗೂ ನನ್ನ ವರದಿಯನ್ನು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ಮಾತು ಕೇಳಿ ಅನುಭವದಂತೆ ಎಂದು ನಿ.ಪಿ.7 ರಂತೆ ಸುಳ್ಳು ಕಚ್ಚಾ ನಕ್ಷೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲನೇ ಬಾರಿಗೆ ಹೋದಾಗ ಕಚ್ಚಾ ನಕ್ಷೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ಹಾಜರುಪಡಿಸಿದರೆ ಸತ್ಯಾಂಸ ಹೊರಬರುತ್ತದೆಂಬ ಉದ್ದೇಶದಿಂದ ಕಚ್ಚಾ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.